# ಶ್ರೀವ್ಯಾಸರಾಜರು





# ಶ್ರೀವ್ಯಾಸರಾಜರ ಜೀವನಚರಿತ್ರೆ, ಗ್ರಂಥಗಳ ಸಂಕ್ಷಿಪ್ತ ಮಾಹಿತಿ

- ಮೂಲರೂಪ – ಶಂಕುಕರ್ಣ–ಬ್ರಹ್ಮದೇವರ ಪೂಜೆಗೆ ಹೂವು, ತುಳಸೀ ತರುವುದು ಮುಖ್ಯ ಕಾರ್ಯ
- ಬ್ರಹ್ಮದೇವರಿಂದ ಶಾಪ – ಬ್ರಹ್ಮದೇವರ ಪೂಜೆಗೆ ತರಬೇಕಾಗಿದ್ದ ತುಳಸಿಪುಷ್ಪವನ್ನು ಒಮ್ಮೆ ಶಂಕುಕರ್ಣ ತರಲಿಲ್ಲ. ಅದರಿಂದ ಕೋಪಗೊಂಡ ಬ್ರಹ್ಮನಿಂದ ಶಾಪ – “ನೀನು ಅಸುರನಾಗಿ ಜನಿಸು” ಎಂದು. ಆದ್ದರಿಂದಲೇ ಶಂಕುಕರ್ಣನು ಪ್ರಹ್ಲಾದರಾಜನಾಗಿ ಹಿರಣ್ಯಕಶಿಪುವಿನ ಮಗನಾಗಿ ಜನನ. ಮೊದಲನೇ ಅವತಾರ.

- ನಂತರ ಕೌರವರ ಪಡೆಯಲ್ಲಿ ಬಾಹ್ಲೀಕ ಮಹಾರಾಜನಾಗಿ ಜನನ – ಅಲ್ಲಿ ಭೀಮಸೇನ ದೇವರು ಅವರನ್ನು ಸಂಹಾರ ಮಾದುತ್ತಾರೆ.
- ನಂತರದ ಅವತಾರವೇ – ನಮ್ಮ ಶ್ರೀವ್ಯಾಸರಾಜರು.
- ಜನನ – 1447 ಏಪ್ರಿಲ್ 22 ಪ್ರಭವ ಸಂವತ್ಸರ ವೈಶಾಖ ಶುದ್ದ ಸಪ್ತಮಿ (ಅಧಿಕಮಾಸದಲ್ಲಿ ಜನನ) ಭಾನುವಾರ
- ಜನನ ಸ್ಥಳ – ಮೈಸೂರು ಜಿಲ್ಲೆ ಕಾವೇರಿ ತೀರದ ಬನ್ನೂರು ಗ್ರಾಮ
- ಜನ್ಮ ನಾಮ – ಯತಿರಾಜ
- ಆಶ್ರಮ ಗುರುಗಳು – ಶ್ರೀ ಬ್ರಹ್ಮಣ್ಯತೀರ್ಥರು, ಅಬ್ಬೂರು
- ವಿದ್ಯಾ ಗುರುಗಳು – ಶ್ರೀ ಶ್ರೀಪಾದರಾಜರು
- ಗೋತ್ರ – ಕಾಶ್ಯಪ ಗೋತ್ರ
- ತಂದೆ – ರಾಮಾಚಾರ್ಯ (ಬಲ್ಲಣ್ಣ ಸುಮತಿ)
- ತಾಯಿ – ಸೀತಾಬಾಯಿ (ಅಕ್ಕಮ್ಮ, ಲಕ್ಷ್ಮಿ)
- ವಿದ್ಯಾಗುರುಗಳು – ಶ್ರೀಪಾದರಾಜ ತೀರ್ಥರು
- ಅಂಕಿತ – ಸಿರಿಕೃಷ್ಣ, ಶ್ರೀಕೃಷ್ಣ
- ವೃಂದಾವನ – ನವವೃಂದಾವನ, ಆನೆಗೊಂದಿ (ಗಜಗಹ್ವೇಶ್ವರ ಕ್ಷೇತ್ರ)
- ಪುಣ್ಯತಿಥಿ – ಫಾಲ್ಗುಣ ಬಹುಳ ಚತುರ್ಥಿ

- ಪೂರ್ವಾದಿಮಠವೇ – ಇಂದಿನ ವ್ಯಾಸರಾಜಮಠ. ವ್ಯಾಸರಾಜರ ಪೂರ್ವದಲ್ಲಿ ಈ ಮಠಕ್ಕೆ ಪೂರ್ವಾದಿಮಠವೆಂಬ ಹೆಸರಿತ್ತು. ಅದೇ ನಂತರ ವ್ಯಾಸರಾಜ ಮಠವಾಯಿತು.

## ಶ್ರೀವ್ಯಾಸರಾಜರು ಬ್ರಹ್ಮಣ್ಯತೀರ್ಥರ ಅನುಗ್ರಹದಿಂದ ಜನಿಸಿದರು –

ಒಮ್ಮೆ ಅಬ್ಬೂರು ಮಠದ ಪರಮ ಶಿಷ್ಯರಾಗಿದ್ದ ಸೀತಾಬಾಯಿಯವರು ತಮ್ಮ ಪತಿ ನಿಧನವಾದ್ದರಿಂದ, ಸಹಗಮನ ಮಾಡಲು ಅನುಮತಿಗಾಗಿ ಅಬ್ಬೂರಿನಲ್ಲಿ ಬ್ರಹ್ಮಣ್ಯತೀರ್ಥರ ಬಳಿ ಬಂದು, ನಮಸ್ಕರಿಸಿದಾಗ ಶ್ರೀಗಳವರು "ದೀರ್ಘಸುಮಂಗಲೀಭವ" ಎಂದು ಮುತ್ತೈದೆಯರಿಗೆ ಆಶೀರ್ವಾದಿಸುವಂತೆ ಆಶೀರ್ವದಿಸಿದರು. ಆದರೆ ಅವರಿಗೆ ಸೀತಾಬಾಯಿ ಇನ್ನೂ ತನ್ನ ಗಂಡ ಸತ್ತ ವಿಷಯ ತಿಳಿಸಿರಲಿಲ್ಲ. ಆಗ ಜನರೆಲ್ಲರೂ, ವಿಪ್ರರೆಲ್ಲರೂ ಆಶ್ಚರ್ಯಪಟ್ಟು ನಿಜವಾದ ಸಂಗತಿ ತಿಳಿಸಿದಾಗ, "ನನ್ನ ಬಾಯಿಂದ "ದೀರ್ಘಸುಮಂಗಲೀ" ಎಂದು ಬಂದಾಯಿತು, ನನ್ನ ನಾಲಿಗೆಯಲ್ಲಿ ನುಡಿಸಿದವನು ವಿಠಲನು. ನನ್ನಲ್ಲಿ ಸನ್ಯಾಸಧರ್ಮವಿದ್ದರೆ, ನನ್ನ ಮಾತು ಸತ್ಯವಾಗಬೇಕು, ಇಲ್ಲವಾದಲ್ಲಿ ಸ್ತ್ರೀಹತ್ಯಾದೋಷ–ವಿಠಲನಿಗೆ ಹತ್ಯಾ ದೋಷ ಎರಡೂ ಸಂಭವಿಸಬೇಕಾಗುತ್ತದೆ, ನಿನ್ನ ಪತಿ ಮೃತನಾದ ಸ್ಥಳ ತೋರಿಸು" ಎಂದು ಹೊರಟರು. ಆದರೆ ಶ್ರೀಗಳವರ ಶಿಷ್ಯರು ಸ್ವಾಮಿಗಳಿಗೆ ಮೃತದೇಹವನ್ನು ನೋಡಲು ಬಿಡಲಿಲ್ಲ, (ಕಾರಣ – ಶ್ರೀಗಳವರು ಶವವನ್ನು ನೋಡಬಾರದು.) ಸ್ವಾಮಿಗಳು ಒಪ್ಪದೆ ನೇರವಾಗಿ ಹೆಣದ ಬಳಿ ಬಂದು ಕಮಂಡಲೋದಕವನ್ನು ಮೃತದೇಹದ ಮೇಲೆ ಮಂತ್ರೋಚ್ಚಾರಣೆ ಮಾಡಿ ಪ್ರೋಕ್ಷಿಸಲು ರಾಮಾಚಾರ್ಯರು ನಿದ್ದೆಯಿಂದ ಎದ್ದಂತೆ, ಎದ್ದು ನಿಂತು ನಮಸ್ಕರಿಸಲು, ಸ್ವಾಮಿಗಳು "ಸುಪುತ್ರಾ ಪ್ರಾಪ್ತಿರಸ್ತು" ಎಂದು ಆಶೀರ್ವದಿಸಿದರು. ಆಗಲೇ ವೃದ್ಧದಂಪತಿಗಳಾಗಿದ್ದ ಅವರಿಗೇ ಆಶ್ಚರ್ಯವಾಯಿತು. "ನಿಮಗೆ ಹುಟ್ಟಿದ ಮೊದಲ ಮಗುವನ್ನು ನಮಗೇ ನೀಡಬೇಕು" ಎಂದರು ಸ್ವಾಮಿಗಳು. ಕೆಲಕಾಲದಲ್ಲಿಯೇ ಸೀತಾಬಾಯಿ ಗರ್ಭವತಿಯಾದಳು. ಈ ಸುದ್ದಿ ತಿಳಿದ ಬ್ರಹ್ಮಣ್ಯತೀರ್ಥರು ಪ್ರಸವಕಾಲದಲ್ಲಿ ಭೂಸ್ಪರ್ಶವಾಗದಂತೆ ಶಿಶುವನ್ನು ತರಬೇಕೆಂದು ಬಂಗಾರದ ಹರಿವಾಣವನ್ನು ಕಳುಹಿಸಿದರು. ಹೀಗೆ ಜನಿಸಿದ ಶಿಶುವನ್ನು ಅಪರೋಕ್ಷ

ಜ್ಞಾನಿಗಳಾದ ಬ್ರಹ್ಮಣ್ಯತೀರ್ಥರು ಕಣ್ವನದಿಯ ತೀರ್ಥದಲ್ಲಿ ಅದನ್ನು ತೊಳೆದು, ಕೃಷ್ಣನ ಮುಂದೆ ಮಲಗಿಸಿ, ಅದನ್ನು ಸಂರಕ್ಷಿಸಿದರು. ಮುಂದೆ ಆ ಮಗುವಿಗೆ ಆಶ್ರಮ ನೀಡಿ "ವ್ಯಾಸತೀರ್ಥ" ಎಂದು ಹೆಸರಿಟ್ಟರು. ಹೀಗೆ ಬ್ರಹ್ಮಣ್ಯತೀರ್ಥರು ನೀಡಿದ ಮಹೋನ್ನತ ಕಾಣಿಕೆಯೇ ನಮ್ಮ ಕಥಾನಾಯಕರಾದ – ವ್ಯಾಸರಾಜರು.

## ಕಂಚಿಯಲ್ಲಿ ಅರಳಿದ ವ್ಯಾಸರಾಜರು –

ಆಗಿನ ಕಾಲದಲ್ಲಿ "ಕಂಚಿ" ವೇದಾಂತ ವಿದ್ಯೆಯ ವಿಶ್ವವಿದ್ಯಾನಿಲಯವಾಗಿತ್ತು. ವ್ಯಾಸತೀರ್ಥರು ತಮ್ಮ ಸಂಚಾರ ಕ್ರಮದಲ್ಲಿ ಅಲ್ಲಿಗೆ ಆಗಮಿಸಿದರು. ಕಾಂಚೀನಗರದ ಸಾರಸ್ವತ, ಪಾಣಿನೀಯ, ಶಾಕಟಾಯನಾದಿ ವೈಯಾಕರಣಿಗಳಿಂದಲೂ, ಚಾರ್ವಾಕಾದಿಗಳಿಂದಲೂ, ಮಹಾ ಪಂಡಿತರಿಂದಲೂ, ಸಂಶೋಧಕರಿಂದಲೂ, ಬಹಳ ಪ್ರಖ್ಯಾತವಾಗಿತ್ತು. ಇಂತಹ ವಿದ್ಯಾಕೇಂದ್ರದಲ್ಲಿ ವ್ಯಾಸತೀರ್ಥರು ಬಂದ ಕೆಲವೇ ದಿನಗಳಲ್ಲಿ ತಮ್ಮ ವಿದ್ಯಾಪ್ರಭೆಯಿಂದ ವಿಖ್ಯಾತರಾದರು. ಚಿಕ್ಕವಯಸ್ಸಿನ ವ್ಯಾಸತೀರ್ಥರನ್ನು ಕೆಣಕಬೇಕೆಂದು ಬಂದ ಕಂಚಿಯ ಪಂಡಿತರು ಇಡೀ ಮಧ್ವಸಿದ್ಧಾಂತವನ್ನು ಒಂದೇ ಮಾತಿನಲ್ಲಿ ಹೇಳಿರಿ ಎಂದಾಗ, ವ್ಯಾಸರಾಜರು ಹೀಗೆಂದರು –

**ಶ್ರೀಮಧ್ವಮತಪ್ರಮೇಯನವರತ್ನಮಾಲಿಕಾ**

**ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ವತೋ ।**
**ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ ॥**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ**
**ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥**

ಶ್ರೀಮನ್ಮಧ್ವಸಿದ್ಧಾಂತದಲ್ಲಿ –

(೧) ಶ್ರೀಹರಿಯೇ ಸರ್ವೋತ್ತಮನು

(೨) ಪ್ರಮಾಣ ಪ್ರಮಿತವಾದ ಈ ಜಗತ್ತು ಪಾರಮಾರ್ಥತಃ ಸತ್ಯವು

(೩) ಜೀವೇಶ್ವರ ಭೇದ, ಜಡೇಶ್ವರ ಭೇದ, ಜೀವ–ಜಡಭೇದ, ಜೀವ–ಜೀವಭೇದ, ಜಡ–ಜಡ ಭೇದಗಳೆಂಬ ಭೇದಪಂಚಕವು ಪಾರಮಾರ್ಥಿಕವು

(೪) ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರುಗಳು ಯಾವಾಗ್ಯೂ ಶ್ರೀಹರಿಯ ಅಧೀನರು (೫) ಸ್ವಭಾವತಃ ತಾರತಮ್ಯದಲ್ಲಿ ಇರುವವರು

(೬) ಸ್ವರೂಪಭೂತಾನಂದಾನುಭವವೇ ಸಾತ್ವಿಕರಿಗೆ ಮುಕ್ತಿಯು

(೭) ಪರಮ ನಿರ್ಮಲ ವಿಷ್ಣು ಭಕ್ತಿಯೇ ಆ ಮುಕ್ತಿಯ ಸಾಧನವು

(೮) ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಪ್ರಮಾಣಗಳು ಮೂರೇ

(೯) ಶ್ರೀಹರಿಯೇ ಅಖಿಲ ಸದಾಗಮಗಳಿಂದ ಪರಮ ತಾತ್ಪರ್ಯಪೂರ್ವಕ ಮುಖ್ಯ ಪ್ರತಿಪಾದ್ಯನು, ಎಂದು ಈ ಪ್ರಮೇಯ ನವರತ್ನಗಳು ಪ್ರಕಾಶಿಸುತ್ತವೆ.

**ಹೀಗೆ ಹೇಳಿ ಸಮರ್ಥವಾಗಿ ಮಧ್ವಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರ ಪಾಂಡಿತ್ಯಕ್ಕೆ ಮೆಚ್ಚಿ ಮಾರುಹೋದ ವಿಷ್ಣುಕಂಚಿಯ ವಿದ್ವಾಂಸರು ವ್ಯಾಸರಾಜರನ್ನು ದಿವ್ಯವಾದ ಪಲ್ಲಕ್ಕಿಯಲ್ಲಿ ಕೂಡಿಸಿ, ದೇವಾಲಯದ ಸಕಲ ಸಾಂಪ್ರದಾಯಿಕ ವೈಭವದೊಡನೆ, ವಾದ್ಯ–ವೇದಘೋಷದಿಂದ ಪೂರ್ಣಕುಂಭದೊಡನೆ, ವರದರಾಜಸ್ವಾಮಿ ದೇವಾಲಯಕ್ಕೆ ಕರೆದೊಯ್ದರು.**

**ತರುಣ ಸನ್ಯಾಸಿಗಳಾದ ಶ್ರೀವ್ಯಾಸತೀರ್ಥರ ಪ್ರಭಾವವನ್ನು ಸೈರಿಸಲಾರದೆ, ಕೆಲವು ಪರಾಜಿತರಾಗಿದ್ದ ವಿದ್ವಾಂಸರು ಒಂದುದಿನ ಪೂಜೆಯಾದ ನಂತರ ಪ್ರಸಾದ ಸ್ವೀಕರಿಸುವಾಗ, ಅಡಿಗೆಯವನೊಡನೆ ಸೇರಿ ಪಿತೂರಿಮಾಡಿ ವಿಷಪ್ರಾಶನ ಮಾಡಿಸಿದರು. ಸ್ವಾಮಿಗಳು ಅದನ್ನು ನೈವೇದ್ಯವೆಂದು ಸ್ವೀಕರಿಸಿದರು. ಆದರೆ ಭಗವದರ್ಪಣವಾದ ಆ ವಿಷಾಹಾರ ಶ್ರೀಗಳವರನ್ನು**

ಏನೂ ಮಾಡಲಿಲ್ಲ, ಅದು ಅವರಿಗೆ ಅಮೃತವಾಯಿತು. ಪರಮಾತ್ಮನಿಗೆ ನೈವೇದಿಸಿದ ಮೇಲೆ ಪರಮಾತ್ಮ ಅದರ ಅಸಾರವಾದ ಪದಾರ್ಥಗಳನ್ನೆಲ್ಲ ತೆಗೆದು ಬಿಡುತ್ತಾನೆ.

ಅಲ್ಲಿಂದ ಹೊರಟ ವ್ಯಾಸರಾಜರು ತಮ್ಮ ಆಶ್ರಮ ಗುರುಗಳಾದ ಬ್ರಹ್ಮಣ್ಯತೀರ್ಥರ ಆಶಯದಂತೆ ಮುಳುಬಾಗಿಲಿನ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಶ್ರೀಪಾದರಾಜರಲ್ಲಿಗೆ ಹೊರಟರು.

ಶ್ರೀಪಾದರಾಜರ ಬಳಿ ತರ್ಕ, ವ್ಯಾಕರಣ, ನ್ಯಾಯ, ಛಂದಸ್ಸು, ಮೀಮಾಂಸ, ಷಡ್ದರ್ಶನಗಳನ್ನೂ ಕಲಿಯಲು ಆರಂಭಿಸಿದರು ಶ್ರೀವ್ಯಾಸರಾಜರು. ಕ್ರಮೇಣ ಶ್ರೀಮನ್ಯಾಯಸುಧಾ ಗ್ರಂಥದ ಪಾಠವು ಮುಗಿದಂತೆಲ್ಲಾ, ಅವರ ಜ್ಞಾನ ಮತ್ತು ಕಾಂತಿ ಮತ್ತಷ್ಟು ಹೆಚ್ಚಾಗುತ್ತಿತ್ತು.

**ಶೇಷರೂಪದಿಂದ ಪದ್ಮನಾಭತೀರ್ಥರ ಅನುಗ್ರಹ -**

ಪ್ರತಿದಿನ ಪಾಠಪ್ರವಚನಾದಿಗಳ ನಂತರ, ಮುಳುಬಾಗಿಲಿನ ನೃಸಿಂಹತೀರ್ಥದ ಹಿಂಬಾಗದ ಗುಹೆಯಲ್ಲಿ ಕುಳಿತು ಆಯಾ ದಿನದ ಪಾಠಗಳನ್ನು ಮನನ ಮಾಡುತ್ತ ಇದ್ದರು. ಹೀಗೆ ಒಂದು ದಿನ ಅಭ್ಯಾಸ ಮಾಡುತ್ತಿದ್ದಾಗ, ಒಂದು ಘಟಸರ್ಪವು ಅವರನ್ನು ಸುತ್ತುವರೆದಿದ್ದು ಕಾಣಿಸಿ, ಅದನ್ನು ನೋಡಿದ ಅಪರೋಕ್ಷ ಜ್ಞಾನಿಗಳಾದ ಶ್ರೀಪಾದರಾಜರು ಯೋಚಿಸಲು, ಅದು ಸರ್ಪರೂಪದ ಯತಿವರ್ಯರಂತೆ ಗೋಚರವಾಯಿತು. ಶ್ರೀಪಾದರಾಜರು ಅಂತರ್ಗತರಾಗಿ ಧ್ಯಾನದೃಷ್ಟಿಯಲ್ಲಿ ನೋಡಲು, ತಮ್ಮ ಮಠದ ಮೂಲಪುರುಷರೂ ಆದ ಶ್ರೀಪದ್ಮನಾಭತೀರ್ಥರೇ ಎನ್ನುವಂತೆ ಭಾಸವಾಯಿತು. ದಿವ್ಯಯೋಗಶಕ್ತಿಯಿಂದ ಚಿತ್ತೈಕಾಗ್ರತೆಯಿಂದ ಸರ್ಪಭಾಷೆಯಲ್ಲೇ ಆ ಸರ್ಪವನ್ನು ಮಾತನಾಡಿಸಿದರು. ಸರ್ಪರೂಪದ ಯತಿಶ್ರೇಷ್ಟರು – ವ್ಯಾಸರಾಯರು

ಮುಂದೆ ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿರುವುದರಿಂದ ಅವರನ್ನು ಆಶೀರ್ವದಿಸಿ ಅನುಗ್ರಹಿಸಲು ಬಂದಿರುವುದಾಗಿ ತಿಳಿಸಿ, ತಮ್ಮ ಆಗಮನ ಹಾಗೂ ಸ್ಪರ್ಶದ ಸಾನ್ನಿಧ್ಯದಿಂದಾಗಿ ಮುಂದೆಂದಿಗೂ ಶ್ರೀ ವ್ಯಾಸರಾಯರಿಗೆ ಶತ್ರುಗಳ ವಿಷಭಾದೆ ಮುಂದೆಂದಿಗೂ ತಟ್ಟುವುದಿಲ್ಲ ಎಂದು ಹೇಳಿ ಕಣ್ಮರೆಯಾಯಿತು.

ತಮ್ಮ ಶಿಷ್ಯನ ಬಗ್ಗೆ ಹೆಮ್ಮೆಯಿಂದ ಗುರುಗಳಾದ ಶ್ರೀಪಾದರಾಜರೇ ಹೊಗಳಿದ ಪರಿ ಈರೀತಿ ಇದೆ –

ರಾ ಗ – ಪೂ ರ್ವಿ : ತಾ ಳ – ಆ ದಿ ತಾ ಳ

ಇದಿರದಾವನು ನಿನಗೀ ಧರೆಯೊಳು ।
ಪದುಮನಾಭನ ದಾಸ ಪರಮೋಲ್ಲಾಸ ।ಪ।
ವಾದಿತಿಮಿರ ಮಾರ್ತಾಂಡನೆಂದೆನಿಸಿದೆ ।
ವಾದಿಶರಭ ಭೇರುಂಡ ವ್ಯಾಸರಾಯ ।೧।
ಯತಿಗಳೊಳು ನಿನ್ನಂದದವರುಗಳ ।
ಪ್ರತಿಗಾಣೆ ಈ ಕ್ಷಿತಿಯೊಳು ಯತಿರಾಯ ।೨।
ಹಮ್ಮನಳಿದು ಶ್ರೀಪತಿ ರಂಗವಿಟ್ಠಲನ್ನ
ಸುಮ್ಮಾನದಿಂ ಸೇವಿಪ ವ್ಯಾಸಮುನಿರಾಯ ।೩।

ಸ್ವಪ್ನದಲ್ಲಿ ಸೂಚನೆ –

ಒಮ್ಮೆ ವ್ಯಾಸರಾಜರು ಪಂಡರಾಪುರದಲ್ಲಿ ಬಿಡಾರ ಹೂಡಿ ಮಧ್ವ ಸಿದ್ಧಾಂತ ಪ್ರಚಾರಕಾರ್ಯದಲ್ಲಿದ್ದಾಗ, ವಿಠಲನು ಸ್ವಪ್ನದಲ್ಲಿ ಕಾಣಿಸಿಕೊಂಡು ಪಂಡರಾಪುರಕ್ಕೆ ಬರಬೇಕೆಂದು ಪಾಂಡುರಂಗನು ಆಹ್ವಾನವಿತ್ತಂತೆ ಗೋಚರವಾಯಿತು. ಅದೇರೀತಿ ಶ್ರೀಪಾದರಾಜರಿಗೆ ಭೀಮರಥಿ ಪುಷ್ಪಾವತಿ ಸಂಗಮ ಕ್ಷೇತ್ರದಲ್ಲಿ ಪಾಂಡವ ವಂಷೀಯನಾದ ಶ್ರೀಕ್ಷೇಮಕಾಂಟ ಮಹಾರಾಜನು ಒಂದು ದೇವರ ಪೆಟ್ಟಿಗೆಯನ್ನು

ಭೂಸ್ಥಾಪನ ಮಾಡಿರುವುದಾಗಿ ತಿಳಿಸಿ ಅದನ್ನು ಪಡೆದು ಪ್ರತಿನಿತ್ಯ ಪೂಜಿಸಲು ಆದೇಶ ಮಾಡಿದಂತಾಯಿತು. ಅದರಂತೆ ಮಾರನೇ ದಿನ ಭೂಗರ್ಭದಲ್ಲಿ ಒಂದು ದೇವರ ಪೆಟ್ಟಿಗೆ ದೊರೆಯಿತು. ಅದರಲ್ಲಿ ಎರಡು ಸಂಪುಟಗಳು ದೊರೆತವು. ಒಂದನ್ನು ತೆಗೆದು ನೋಡಿದಾಗ ಶ್ರೀ ಜಾಂಬವತೀದೇವಿಯರಿಂದ, ನಂತರ ಅರ್ಜುನನಿಂದ ಬಹುಕಾಲ ಪೂಜಿತನಾಗಿದ್ದ ರುಕ್ಮಿಣೀಸತ್ಯಭಾಮಾಸಹಿತ ಶ್ರೀರಂಗವಿಠಲಮೂರ್ತಿಯ ದರ್ಶನವಾಯಿತು. ಅದುವರೆಗೂ ತಮ್ಮ ಕನ್ನಡ ದೇವರನಾಮಗಳನ್ನು "ಗೋಪೀನಾಥ" ಎಂಬ ಅಂಕಿತದಲ್ಲಿ ರಚಿಸುತ್ತಿದ್ದ ಶ್ರೀಪಾದರಾಜರು ಈ ಮೂರ್ತಿ ದೊರೆತಮೇಲೆ "ರಂಗವಿಠಲ" ಅಂಕಿತದಿಂದ ಪದ–ಪದ್ಯ, ಸುಳಾದಿ, ಉಗಾಭೋಗ, ರಚಿಸಲು ಆರಂಭಿಸಿದರು.

## ವ್ಯಾಸರಾಜರೆದುರು ವೇಣುನಾದಮಾಡಿ ನರ್ತನ ಮಾಡಿದ ಕೃಷ್ಣ –

ಒಮ್ಮೆ ಶ್ರೀಪಾದರಾಜರು ತಮ್ಮ ಪ್ರಿಯಶಿಷ್ಯ ವ್ಯಾಸರಾಜರಿಗೆ ಪ್ರತಿಮೆಗಳ ಪೂಜೆ ಆರಂಭಿಸಲು ಹೇಳಿ ಸ್ನಾನಗೃಹದತ್ತ ಹೊರಟರು. ಪೂಜೆಗೆ ಒಂದೊಂದನ್ನಾಗಿ ಅಣಿಗೊಳಿಸಿದರು. ಅಲ್ಲಿದ್ದ ಸಂಪುಟಗಳಲ್ಲಿ ಒಂದನ್ನು ಅಲ್ಲಿಯವರೆಗೂ ಯಾರೂ ತೆಗೆದಿರಲಿಲ್ಲ. ಶ್ರೀವ್ಯಾಸರಾಜರು ಆ ಸಂಪುಟದ ಮುಚ್ಚಳವನ್ನು (ಪಂಡರಾಪುರದಲ್ಲಿ ಶ್ರೀಪಾದರಾಜರಿಗೆ ದೊರಕಿದ ಸಂಪುಟ) ತೆಗೆದಾಗ ಒಳಗಿನಿಂದ ಉದ್ಭವಿಸಿದಂತೆ ಕಂಡ ವೇಣುಗೋಪಾಲ ಮೂರ್ತಿಯು ಕೊಳಲನ್ನು ಬಾರಿಸುತ್ತಾ ಕುಣಿಯುಲಾರಂಭಿಸಿದನು. ರುಕ್ಮಿಣಿ ಸತ್ಯಭಾಮಾಸಹಿತ ಶ್ರೀಗೋಪಾಲಕೃಷ್ಣನ ದಿವ್ಯಮೂರ್ತಿಯ ಪವಿತ್ರ ಸಂದರ್ಶನದಿಂದ ಆನಂದಾತಿರೇಕದಿಂದ ಹರ್ಷಗೊಂಡರು. ಪರಮಾತ್ಮನೆದುರು ಭಗವದ್ದರ್ಶನದಿಂದ ಪರವಶರಾಗಿದ್ದ ಶ್ರೀ ವ್ಯಾಸರಾಜರೆದುರು ವೇಣುಗೋಪಾಲನು ಕೊಳಲನ್ನು ಊದುತ್ತಾ ದಿವ್ಯ ಮನೋಹರ ನರ್ತನ ಮಾಡಲಾರಂಭಿಸಿದನು. ಆಗ ಅಲ್ಲಿಯೇ ಇದ್ದ ಸಾಲಿಗ್ರಾಮಗಳನ್ನು ತಾಳಗಳಂತೆ ಬಡಿಯುತ್ತಾ ಕೃಷ್ಣನೊಂದಿಗೇ ಮೈಮರೆತು ಭಾವಾವೇಶದಲ್ಲಿ ಅವನ ಅನಂತ ಮಹಿಮಾತಿಶಯಗಳನ್ನು ಹಾಡುತಾ ತಾವೂ ಕುಣಿಯಲಾರಂಭಿಸಿದರು. – "ಕಾಳಿಂಗನಾ ಮೆಟ್ಟಿ ನಾಟ್ಯವನಾಡಿದ"..

ಹೀಗೆ ಹಾಡುತ್ತಾ ಕುಣಿದುಕೊಂಡು ಸಾಲಿಗ್ರಾಮದಲ್ಲೇ ತಾಳ ಬಡಿಯುತ್ತಿದ್ದಾಗ ಸುತ್ತಮುತ್ತಲಿನ ಶಿಷ್ಯವೃಂದ ಅಚ್ಚರಿಗೊಂಡು ಶ್ರೀಪಾದರಾಜರ ಬಳಿ ಓಡಿಹೋಗಿ ಶ್ರೀವ್ಯಾಸರಾಜರ ಪೂಜಾವೈಭವದ ವಿಚಿತ್ರ ವರ್ತನೆಯನ್ನು ವಿಜ್ಞಾಪಿಸಿಕೊಂಡರು. ಕೂಡಲೇ ಶ್ರೀಪಾದರಾಜರು ಧಾವಿಸಿ ಬಂದು ಸ್ವಲ್ಪ ದೂರದಿಂದಲೇ ನಿಂತು ಬಗ್ಗಿ ನೋಡಿದರು. ಸುಪ್ರೀತನಾಗಿದ್ದ ಶ್ರೀ ವೇಣುಗೋಪಾಲಕೃಷ್ಣನು ನರ್ತನ ಮಾಡುತ್ತಿರುವುದು, ವ್ಯಾಸರಾಜರು ತಮಗರಿವಿಲ್ಲದೆಯೇ ಹಾಡುತ್ತಾ ಕುಣಿಯುತ್ತಿರುವುದೂ ಕಾಣಿಸಿತು. ಶ್ರೀಪಾದರಾಜರ ಪೂರ್ಣ ದೃಷ್ಟಿ ನಾಟ್ಯವಾಡುತ್ತಿದ್ದ ಮೂರ್ತಿಯಮೇಲೆ ಹರಿಯುವಷ್ಟರಲ್ಲಿ ತಾನು ಯಾವ ಭಂಗಿಯಲ್ಲಿ ನಾಟ್ಯವಾಡುತ್ತಿದ್ದನೋ ಅದೇ ಭಂಗಿಯಲ್ಲಿ ಸ್ವಾಮಿಯು ನಿಂತನು. ಪರಮಾತ್ಮನು ತನ್ನ ಬಲಪಾದದ ಮೇಲೆ ಎಡಪಾದವನ್ನಿಟ್ಟು ಅಪೂರ್ವವೆನಿಸುವ ರೀತಿಯಲ್ಲಿ ಥಟ್ಟನೆ ನಿಂತು ದಿವ್ಯ ಘಟನೆಯನ್ನು ಕಣ್ಣಾರೆ ಕಂಡು ವ್ಯಾಸರಾಜರನ್ನು "ನೀವು ಅತ್ಯಂತ ಪುಣ್ಯಶಾಲಿಗಳು. ಭೀಮಾನದಿಯ ತೀರದಲ್ಲಿ ದೊರೆತ ಎರಡು ಸಂಪುಟಗಳಲ್ಲಿ ಒಂದರಲ್ಲಿ ರಂಗವಿಠಲ ನಮಗೊಲಿದ. ಈಗ ವೇಣುಗೋಪಾಲನು ನಿಮ್ಮನ್ನು ಮೆಚ್ಚಿ ನಿಮ್ಮ ಜ್ಞಾನಭಕ್ತಿ ವೈರಾಗ್ಯಗಳಿಗೆ ಸಂಪೂರ್ಣ ಒಲಿದಿದ್ದಾನೆ. ಸ್ವಾಮಿಯ ಈ ಅಮೂಲ್ಯ ವಿಗ್ರಹವನ್ನು ನೀವೇ ಸ್ವೀಕರಿಸಿ, ಪರಮಾತ್ಮನ ಸೇವೆಯನ್ನು ನಡೆಸಿಕೊಂಡು ಬನ್ನಿ" ಎಂದು ಆ ವಿಗ್ರಹಗಳ ಸಂಪುಟವನ್ನು ವ್ಯಾಸಯತಿಗಳಿಗೊಪ್ಪಿಸಿದರು.

## ಪಟ್ಟಾಭಿಷೇಕ –

ಹೀಗೆ ವಿದ್ಯಾಗುರುಗಳಾದ ಶ್ರೀಪಾದರಾಜರ ದಿವ್ಯಸನ್ನಿಧಿಯಲ್ಲಿ ಸಮಸ್ತ ಮಾಧ್ವಶಾಸ್ತ್ರವನ್ನೂ ಕಲಿತ ಶ್ರೀವ್ಯಾಸರಾಜರಿಗೆ ಬ್ರಹ್ಮಣ್ಯತೀರ್ಥರು ಒಂದು ಸುಮುಹೂರ್ತದಲ್ಲಿ ಗೌರವದೊಡನೆ ವ್ಯಾಸಮುಷ್ಟಿಯ ಸಂಪುಟವನ್ನು ಚಿನ್ನದ ಹರಿವಾಣದಲ್ಲಿಟ್ಟು, ವ್ಯಾಸರಾಜರ ತಲೆಮೇಲಿರಿಸಿ, ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿ ಮುಂದಿನ ಮಠಾಧಿಪತಿಗಳೆಂದು ಘೋಷಿಸಿದರು.

## ತಿರುಪತಿಯಲ್ಲಿ ತಿಮ್ಮಪ್ಪನ ಸನ್ನಿಧಿಯಲ್ಲಿ ಶ್ರೀವ್ಯಾಸರಾಜರು –

ಒಮ್ಮೆ ತಿರುಪತಿಯಲ್ಲಿದ್ದ ಅರ್ಚಕರು ಸ್ವಚ್ಚಂದ ಪ್ರವೃತ್ತಿ ಹೆಚ್ಚಿ, ದೇವಾಲಯದ ನೈವೇದ್ಯವನ್ನು ಮಾರಿ ಹಣ ಮಾಡಿಕೊಳ್ಳತೊಡಗಿದರು, ದೇವಾಲಯದ ಒಡವೆ ವಸ್ತುಗಳನ್ನು ತಮ್ಮ ಮಡದಿ, ಮಕ್ಕಳಿಗೆ ಹಾಕಿ ಅಲಂಕರಿಸಿಕೊಂಡರು, ಚಿನ್ನ, ಬೆಳ್ಳಿ, ಒಡವೆಗಳನ್ನು ತಮ್ಮ ಮನೆಯ ಮದುವೆ ಮುಂಜಿ ಸಮಾರಂಭಕ್ಕೆ ವಿನಿಯೋಗಿಸಿಕೊಳ್ಳುತ್ತಿದ್ದರು. ಸಾಳ್ವ ನರಸಿಂಹನು ಆ ಅನ್ಯಾಯವನ್ನು ಕಂಡು ಕೋಪಗೊಂಡು ಅವರನ್ನೆಲ್ಲಾ ಸಂಹರಿಸಿದ್ದರಿಂದ ಬ್ರಹ್ಮಹತ್ಯಾದೋಷ ನಿವಾರಣೆಗಾಗಿ ಶ್ರೀಪಾದರಾಜರಲ್ಲಿ ಬಂದು ಬೇಡಿದಾಗ, ಅದನ್ನು ಪರಿಹಾರ ಮಾಡಿಸಿದರು ಶ್ರೀಪಾದರಾಜರು. ಆ ಸಮಯದಲ್ಲಿ ತಿರುಪತಿಯಲ್ಲಿ ದೇವರ ಪೂಜೆಗೆ ಅರ್ಹ ಆ ಮನೆತನದ ಬ್ರಾಹ್ಮಣರಾರು ಇಲ್ಲದ ಸಂದರ್ಭದಲ್ಲಿ ಶ್ರೀವ್ಯಾಸರಾಜರು ೧೨ ವರ್ಷಕಾಲ ತಿಮ್ಮಪ್ಪನ ಪೂಜೆ ಸಲ್ಲಿಸಿದರು. ತಮ್ಮ ತಪಶ್ಶಕ್ತಿಯಿಂದ ಮತ್ತೆ ಪ್ರತಿಮೆಯಲ್ಲಿ ಸಾನ್ನಿಧ್ಯವನ್ನು ತಂದರು.

ಕೃಷ್ಣದೇವರಾಯನಿಗೆ ಅನೇಕ ಜನ ಧರ್ಮಗುರುಗಳಿದ್ದರೂ, ಪ್ರಪ್ರಥಮ ಪುರಸ್ಕಾರ, ಗೌರವಕ್ಕೆ ಭಾಜನರಾಗಿದ್ದವರು – ಶ್ರೀವ್ಯಾಸರಾಜರು. ತಾವು ತಿರುಪತಿ ಶ್ರೀನಿವಾಸನ ಕೈಂಕರ್ಯ ನಡೆಸುತ್ತಿದ್ದ ಕಾಲದಲ್ಲಿ ಪ್ರತಿದಿನ ಪಾಠ, ಪ್ರವಚನ, ಪೂಜೆ, ವಿದ್ವತ್ ಸಭೆಗಳನ್ನು ನಡೆಸುತ್ತಿದ್ದ ಗುರುಗಳು ತಮ್ಮಿಂದ ಸಮಗ್ರ ಸಾಮ್ರಾಜ್ಯ ಸಂರಕ್ಷಣೆ ಹಾಗೂ ಹಿಂದೂ ಧರ್ಮದ ಪುನರುತ್ಥಾನದ ಮಹಾಕಾರ್ಯಗಳು ನಡೆಯಬೇಕೆಂಬುದನ್ನು ಅರಿತು, ವಿಜಯನಗರದತ್ತ ಹೊರಡಲು ನಿರ್ಧರಿಸಿದಾಗ, ಅರ್ಚಕ ತಾತಾಚಾರ್ಯರ ವಂಶೀಕ ಮಗುವೊಬ್ಬ ಉಳಿದುದನ್ನು ತಿಳಿದು, ಅವನನ್ನು ಕರೆಸಿ, ಆ ಬಾಲಕನಿಗೆ ಉಪನಯಾದಿ ಸಂಸ್ಕಾರಗಳನ್ನು ಮಾದಿ, ಆಗಮೋಕ್ತ ಪೂಜಾಪದ್ಧತಿಯನ್ನು ತಿಳಿಸಿ ಶ್ರೀನಿವಾಸನ ಕೈಂಕರ್ಯವನ್ನು ಅವನಿಗೊಪ್ಪಿಸಿದರು.

ವ್ಯಾಸರಾಜರು ಮನಸ್ಸು ಮಾಡಿದ್ದರೆ ಇಡೀ ತಿರುಪತಿಯ ವೈಭೋಗದ ಪೂಜೆಯನ್ನು ತಮ್ಮ ಮಠಕ್ಕೇ ಇಟ್ಟುಕೊಂಡು ಮಾಧ್ವ ಸಮುದಾಯಕ್ಕೆ ಅರ್ಪಿಸಬಹುದಿತ್ತು. ಆದರೆ ಬಹಳ ಕರುಣಾಶಾಲಿಗಳಾದ ಅವರು ಹಾಗೆ ಮಾಡದೆ, ವಾಪಸ್ಸು ಶ್ರೀವೈಷ್ಣವಮನೆತನಕ್ಕೇ ಕೊಟ್ಟರು.

## ಕೃಷ್ಣದೇವರಾಯನ ಕುಹುಯೋಗ ಪರಿಹಾರ –

ವಿಜಯನಗರದಲ್ಲಿ ಕೃಷ್ಣದೇವರಾಯನಿಗೆ ರಾಜಕಾರಣದಲ್ಲಿ ಮಹಾಮಂತ್ರಿ ತಿಮ್ಮರಸುವಿದ್ದಂತೆ, ಧರ್ಮಕಾರಣದಲ್ಲಿ ಶ್ರೀವ್ಯಾಸರಾಜರು ಸಾಮ್ರಾಜ್ಯದ ರಾಜಗುರುಗಳಾಗಿದ್ದರು

ತಮ್ಮ ಕಾವಿಯನ್ನು ಆ ಒಂದು ಘಳಿಗೆ ಸಿಂಹಾಸನದಲ್ಲಿರಿಸಿ, ಕೃಷ್ಣದೇವರಾಯನ ಕುಹುಯೋಗ ಪರಿಹಾರ ಮಾಡಿದರಿಂದ ಬಹಳ ಸಂತೋಷಗೊಂಡ ಶ್ರೀಕೃಷ್ಣದೇವರಾಯರು ತನ್ನ ಸಮಸ್ತ ರತ್ನ, ವೈಡೂರ್ಯಾದಿ ಅಲಂಕರಣ ಸಾಮಗ್ರಿಗಳಿಂದ ರತ್ನಾಭಿಷೇಕ ಮಾಡಿದನು. ಶ್ರೀವ್ಯಾಸರಾಜರು ಆ ಸಮಸ್ತ ರತ್ನರಾಶಿಗಳನ್ನೂ ಅಲ್ಲಿದ್ದವರೆಲ್ಲರಿಗೂ ದಾನಮಾಡಿದರು.

## ಪಕ್ಷಧರಮಿಶ್ರನೊಡನೆ ವಾಗ್ವಾದ – ಶತ್ರುವಿನಿಂದಲೇ ಪ್ರಶಂಸೆ –

ಉತ್ತರಭಾರತ ಸಂಚಾರದಲ್ಲಿ ವ್ಯಾಸರಾಜರು ಪಕ್ಷಧರಮಿಶ್ರನೊಡನೆ ನಡೆಸಿದ ವಾದ ಐತಿಹಾಸಿಕವೆನಿಸಿತು. ಪಕ್ಷಧರಮಿಶ್ರ ಇಮ್ಮಡಿ ಜಯದೇವ ಎಂಬ ಪ್ರಶಸ್ತಿಗೆ ಭಾಜನನಾಗಿದ್ದವನು. ಇವನಿಗೆ "ಪೀಯೂಷವರ್ಷ" ಎಂಬ ಹೆಸರೂ ಇತ್ತು. ಇವನು

ಹಲವಾರು ಗ್ರಂಥಗಳನ್ನೂ, ನಾಟಕಗಳನ್ನೂ, ಕಾವ್ಯಗಳನ್ನೂ ರಚಿಸಿದ್ದನು. ವ್ಯಾಸರಾಜರು ಅವನೊಂದಿಗೆ ೧೦ ದಿನಗಳ ಕಾಲ ವಾಗ್ವಾದ ಮಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿ, ಕಡೆಗೆ ಅವನು ವ್ಯಾಸರಾಜರಿಗೆ ದೀರ್ಘದಂಡಪ್ರಣಾಮ ಮಾಡಿ ತನ್ನನ್ನು ತಮ್ಮ ಶಿಷ್ಯರನ್ನಾಗಿ ಅಂಗೀಕರಿಸಬೇಕೆಂದು ಕೋರಿದನು. ಅವನು ವ್ಯಾಸರಾಜರನ್ನು ನಿಮ್ಮ ಗುರುಗಳು ಯಾರು ಎಂದು ವಿಚಾರಿಸಲು, ನಂತರ ಶ್ರೀಪಾದರಾಜರಲ್ಲಿಗೆ ಬಂದು "ವ್ಯಾಸರಾಜರು ನಾನು ಓದಿರುವುದನ್ನೆಲ್ಲಾ ಓದಿದ್ದಾರೆ, ಓದದೇ ಇರುವುದನ್ನೂ ಓದಿದ್ದಾರೆ, ಈ ಪಕ್ಷಧರಮಿಶ್ರನ ಹೆಗ್ಗಳಿಕೆಯಾಗಿದ್ದ ಎರಡು ಪಕ್ಷಗಳನ್ನು ತಮ್ಮ ವಗ್ವಜ್ರಪ್ರಹಾರದಿಂದ ಕತ್ತರಿಸಿದ ಅವರು ಕೇವಲ ವ್ಯಾಸರಾಜರಲ್ಲ, ಅಭಿನವ ವ್ಯಾಸರೇ ಸರಿ" ಎಂದು ಪ್ರಶಂಶಿಸಿದನು.

- ನವಕೋಟಿ ನಾರಾಯಣರೆಂತೆನಿಸಿದ್ದ ಶ್ರೀನಿವಾಸನಾಯಕರಿಗೆ ದಾಸದೀಕ್ಷೆ ಇತ್ತು "ಪುರಂದರದಾಸ"ರೆಂದು ಕರೆದು, ಅವರು ೪ಲಕ್ಷಕ್ಕೂ ಹೆಚ್ಚು ದೇವರನಾಮಗಳನ್ನು ರಚಿಸಲು ಸ್ಫೂರ್ತಿಯಾದರು. ಪುರಂದರದಾಸರು ಬರೆದ ದೇವರನಾಮಗಳನ್ನು ತಮ್ಮ ವೇದವ್ಯಾಸಗ್ರಂಥದ ಜೊತೆಗೇ ಇಟ್ಟು "ಪುರಂದರೋಪನಿಷತ್" ಎಂದರು. ಮುಂದೆ ಕೃಷ್ಣದೇವರಾಯನ ಮುಖಾಂತರ ಪುರಂದರಮಂಟಪವೆನ್ನುವ ಶಿಲಾಮಂಟಪವೊಂದನ್ನು ಏರ್ಪಡಿಸಿ ಪುರಂದರದಾಸರ ಜಪ-ತಪಕ್ಕೆ ಅನುಕೂಲ ಮಾಡಿಕೊಟ್ಟರು.

- ಕನಕದಾಸರಿಗೆ ಆಶ್ರಯವಿತ್ತರು. ಜಾತಿಯಲ್ಲಿ ಕೀಳಜಾತಿಯವನಾದರೂ ಕನಕದಾಸರನ್ನು ಪುರಂದರದಾಸರ ಸರಿಸಮವಾಗೇ ಕಂಡರು. ಇದರಿಂದ ತಮ್ಮ ಕೆಲವು ಶಿಷ್ಯರಲ್ಲಿ ಅಸಮಾಧಾನಗೊಂಡರೂ ಕನಕನನ್ನು ಬಿಡಲಿಲ್ಲ. ವ್ಯಾಸರಾಜರು ಕನಕನಲ್ಲಿ ಕಂಡದ್ದು ಅವನ ಅಪಾರವಾದ ಭಕ್ತಿ ವೈರಾಗ್ಯವೇ ಹೊರತು ಜಾತಿಯನ್ನಲ್ಲ.

❖ವ್ಯಾಸರಾಜರು ತಮ್ಮ ಪರಮ ಆಪ್ತ ಶಿಷ್ಯನಾಗಿದ್ದ ವಿಷ್ಣುತೀರ್ಥರನ್ನು ಸುರೇಂದ್ರರಿಗೆ ನೀಡಿದರು. ಆ ವಿಷ್ಣುತೀರ್ಥರೇ ವಾದಿಸಿಂಹರಾಗಿದ್ದ, 104 ಗ್ರಂಥಗಳನ್ನು ಬರೆದ, ಸಕಲವಿದ್ಯಾಪ್ರಾವೀಣ್ಯತೆ ಹೊಂದಿದ್ದ ಕುಂಭಕೋಣದಲ್ಲಿ ವಿರಾಜಮಾನರಾಗಿರುವ ವಿಜಯೀಂದ್ರರು.

## ಯಂತ್ರೋದ್ಧಾರಕ ಪ್ರಾಣದೇವರು

– ವ್ಯಾಸರಾಜರು ತುಂಗಭದ್ರೆಯ ಚಕ್ರತೀರ್ಥದ ಬಳಿ ಸ್ನಾನಾಹ್ನೀಕಗಳನ್ನು ಪೂರೈಸಿ ಸಮೀಪದ ಪ್ರಶಾಂತವಾದ ಸ್ಥಳದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಆಗ ವಾಯುದೇವರು ಮತ್ತೆಮತ್ತೆ ಆಂಜನೇಯನ ರೂಪದಲ್ಲಿ ಬಂದು ತಮ್ಮ ಪ್ರತಿಷ್ಟಾಪನೆಗೆ ಆದೇಶವಿತ್ತರು. ಒಮ್ಮೆ ಅವರು ಹೀಗೆ ಧ್ಯಾನಕ್ಕೆ ಕುಳಿತಾಗ, ಬಂಡೆಯೊಂದರಿಂದ ಕಪಿಯೊಂದು ಬಂದು ಕಣ್ಮರೆಯಾಯಿತು. ಈ ಘಟನೆ ಹಲವಾರು ಬಾರಿ ಪುನರಾವರ್ತನೆಯಾದಾಗ, ಅದೇ ಬಂಡೆಯ ಕಲ್ಲಿನ ಮೇಲೆ ಅಂಗಾರದಿಂದ ಪ್ರಾಣದೇವರನ್ನು ಬರೆದು ದ್ವಾದಶನಾಮಗಳನ್ನು ತಿದ್ದಿ ಧ್ಯಾನಿಸಲು ಕಣ್ಮುಚ್ಚಿದರು. ಕಣ್ಣುಬಿಟ್ಟೊಡನೆಯೇ ಬಂಡೆಯ ಮೇಲೆ ಕೆತ್ತಲ್ಪಟ್ಟಿದ್ದ ಆ ಮೂರ್ತಿಯು ಜೀವ ತಳೆದು ಬಂಡೆಯಿಂದ ಕೆಳಗೆ ಹಾರಿ ಮಾಯವಾಯಿತು. ವ್ಯಾಸರಾಜರು ಮತ್ತೆ ಅಂಗಾರದಿಂದ ಮೂರ್ತಿಯನ್ನು ತಿದ್ದಿದರು. ಅದು ಮತ್ತೆ ಜೀವ ತಳೆದು ಮಾಯವಾಯಿತು. ಹೀಗೆ 12 ಸಲ ವ್ಯಾಸರಾಜರು ಮೂರ್ತಿಯನ್ನು ಅಲ್ಲಿ ಮೂಡಿಸಲು ಪ್ರಯತ್ನಿಸಿದಾಗ, ಹನ್ನೆರಡೂ ಸಲ ಅದು ಹಾರಿ ಹೋಯಿತು. ನಂತರ ಧ್ಯಾನಕ್ಕೆ ಕುಳಿತು ಮನಸ್ಸಿನಲ್ಲೇ ಕಾರಣವನ್ನು ಅರಿತರು. ನಂತರ ಆ ಬಂಡೆಯ ಮೇಲೆ ಮೊದಲು ಷಟ್ಕೋಣವನ್ನೂ, ಅದರ ಸುತ್ತ ವಲಯಾಕಾರವನ್ನೂ ಯಂತ್ರದಂತೆ ರಚಿಸಿ, ಅದರ ಸುತ್ತಲೂ ಪದ್ಮದಳಗಳನ್ನು ಬರೆದರು. ಮಧ್ಯದಲ್ಲಿ ಯೋಗಾಸನಾರೂಢನಾಗಿ ಜಪಮಾಲೆ ಹಿಡಿದು ಕುಳಿತ ಧ್ಯಾನಮಗ್ನ ಮುಖ್ಯ ಪ್ರಾಣದೇವರನ್ನು ಬರೆದು ಮೊದಲು ಹಾರಿಹೋದ ಹನ್ನೆರಡು ಕಪಿಗಳನ್ನೂ, ಪದ್ಮದಳಗಳ ತುದಿಯಲ್ಲಿ ಮುಖ್ಯಪ್ರಾಣನಿಗೆ ಮಾಲಾಕಾರವಾಗಿ ಕಪಿಬಂಧ ಹೆಣೆದರು. ಈ ಯಂತ್ರದಲ್ಲಿ ಒಂದು ಕೋಟಿ ಬೀಜಾಕ್ಷರ ಮಂತ್ರ ಅಡಕವಾಗಿದೆಯೆಂದೂ, ಇದರ ಸಿದ್ಧಿಗಾಗಿ ವ್ಯಾಸರಾಜರು ಮೂರುಕೋಟಿ ಮಂತ್ರಗಳನ್ನು

ಜಪಿಸಿ ಪ್ರಾಣದೇವರ ಸನ್ನಿಧಾನವನ್ನು ಸ್ಥಿರವಾಗಿ ನಿಲ್ಲಿಸಿದ್ದಾರೆಂದೂ, ಅಪರೋಕ್ಷ ಜ್ಞಾನಿಗಳಾದ ವಿಜಯದಾಸರು ತಮ್ಮ ಯಂತ್ರೋದ್ಧಾರಕ ಸುಳಾದಿಯಲ್ಲಿ ತಿಳಿಸಿದ್ದಾರೆ.

“ಮೂರು ಕೋಟಿ ಬೀಜಾಕ್ಷರ ಮಂತ್ರವ ಜಪಿಸಿ
ವ್ಯಾಸರಾಯರು ಎರೆದ ನಿನ್ನ ಈ ಸುಂದರ ಮೂರುತಿಯಲಿ”

## 732 ಪ್ರಾಣದೇವರ ವಿಗ್ರಹಗಳ ಪ್ರತಿಷ್ಠಾಪನೆ –

ಮುಂದೆ ತಾವು 732 ಹನುಮಂತದೇವರ ವಿಗ್ರಹಗಳನ್ನು ಪ್ರತಿಷ್ಟೆ ಮಾಡಲು, ಈ ಯಂತ್ರೋದ್ಧಾರಕ ಪ್ರಾಣದೇವರೇ ವ್ಯಾಸರಾಜರಿಗೆ ಸ್ಫೂರ್ತಿಮೂರ್ತಿಯಾಯಿತು.

ಒಮ್ಮೆ ಮುಳುಬಾಗಿಲಿನಲ್ಲಿ ಶ್ರೀವ್ಯಾಸರಾಜರಿಗೆ ವಿಚಿತ್ರ ಸ್ವಪ್ನವಾಯಿತು. ಸ್ವಪ್ನದಲ್ಲಿ ಅವರು ಪ್ರಾಣದೇವರನ್ನು ಪೂಜಿಸಿದಂತೆಯೂ, ಅದು ನೋಡುನೋಡುತ್ತಿರುವಂತೆಯೇ ವಿಭಜನೆ ಹೊಂದಿ 732 ಮೂರ್ತಿಗಳಾಗಿ ಭಾಸವಾಯಿತು. ಸ್ವಪ್ನದಿಂದ ಎಚ್ಚೆತ್ತ ನಂತರ ವ್ಯಾಸರಾಜರು 732 ಮುಖ್ಯ ಪ್ರಾಣಪ್ರತೀಕಗಳನ್ನು ಪ್ರತಿಷ್ಟಾಪಿಸುವ ಸಂಕಲ್ಪ ಕೈಗೊಂಡರು.

### ವ್ಯಾಸರಾಜ ಪ್ರತಿಷ್ಟಿತ ಪ್ರಾಣದೇವರ ಲಕ್ಷಣಗಳು –

- ಆಂಜನೇಯನ ಬಾಲಕ್ಕೆ ಘಂಟೆ ಇರುತ್ತದೆ
- ಸೊಂಟದ ಮೇಲೆ ಸೌಗಂಧಿಕಾ ಪುಷ್ಪ ಸಹಿತವಾದ ಎಡಗೈ ಎರುತ್ತದೆ
- ಬಾಲದ ಹೊರಕ್ಕೆ ಚಾಚಿ ಎತ್ತಿರುವ ಬಲ ಅಭಯ ಹಸ್ತವಿರುತ್ತದೆ
- ಶಿರಸ್ಸಿನ ಮೇಲೆ ರಾಮನಾಮದ ಕೆತ್ತನೆಯಿರುತ್ತದೆ
- ಪ್ರಭಾವಳಿಯಲ್ಲಿ ದಶಾವತಾರ ಮೂಡಿರುತ್ತದೆ
- ಆಂಜನೇಯ ನವರತ್ನ ಮಾಲೆಯಿಂದ ಅಲಂಕೃತನಾಗಿರುತ್ತಾನೆ
- ಮೇಲ್ಭಾಗದ ಎಡ-ಬಲಗಳಲ್ಲಿ ಶಂಖ-ಚಕ್ರಗಳಿರುತ್ತವೆ

- ಚಂಡಿಕೆಗಳನ್ನು ಮುಡಿಕಟ್ಟಿರುತ್ತಾನೆ
- ಧೀರೋದ್ಧಾತ್ತನಾಗಿ ವೀರಾವೇಶದಿಂದ ಸಾಗರ ದಾಟಲು ಜಿಗಿಯುವ ಭಂಗಿಯಲ್ಲಿದ್ದಾನೆ
- ಕಾಲುಗಳ ಮಧ್ಯದಲ್ಲಿ ರಾವಣಾಸುರನ ಮಗ ಅಕ್ಷಯಕುಮಾರ ಸಂಹಾರವಾದ ಚಿತ್ರವಿರುತ್ತದೆ

ಸಾಮಾನ್ಯವಾಗಿ ಈ ಮೇಲ್ಕಂಡ ಲಕ್ಷಣಗಳಲ್ಲೇ ಇರುತ್ತದೆ “ಶ್ರೀವ್ಯಾಸರಾಜ ಪ್ರತಿಷ್ಟಿತ ಮುಖ್ಯಪ್ರಾಣದೇವರು”. ಎಲ್ಲ ಪ್ರಾಣದೇವರಲ್ಲೂ ಇಲ್ಲದಿರಬಹುದು. ಒಂದೊಂದರಲ್ಲಿ ಒಂದೊಂದು ರೀತಿ ಮೇಲ್ಕಂಡ ಲಕ್ಷಣಗಳು ಅಡಕವಾಗಿರುತ್ತವೆ. ಸಾಮಾನ್ಯವಾಗಿ ಬಾಲದಲ್ಲಿ ಘಂಟೆ ಎಲ್ಲ ಪ್ರಾಣದೇವರಲ್ಲೂ ಕಾಣಸಿಗುತ್ತದೆ.

## ವ್ಯಾಸರಾಜರಿಂದ ಪ್ರತಿಷ್ಟಿತ ಪ್ರಾಣದೇವರ ಕೆಲವು ಕ್ಷೇತ್ರಗಳು –

ಮುಳುಬಾಗಿಲು, ಮಜ್ಜಿಗೆಹಳ್ಳಿ ಮಾಧವತೀರ್ಥರ ಮೂಲಸಂಸ್ಥಾನವಿರುವ ತಂಬೇಹಳ್ಳಿ, ಕೋಲಾರದ ಬಳಿ ನರಸಾಪುರ, ಮಾಲೂರಿನಲ್ಲಿ, ಹೊಸಕೋಟೆಯಲ್ಲಿ, ಬೆಂಗಳೂರಿನ ಅಲಸೂರಿನಲ್ಲಿ, ಬೆಂಗಳೂರು ಸಿಟಿ ಮಾರ್ಕೆಟ್ ಬಳಿಯಿರುವ ಕೋಟೆ ಆಂಜನೇಯಸ್ವಾಮಿ, ಮೈಸೂರು ರಸ್ತೆಯ ಕರೇಕಲ್ಲು ಆಂಜನೇಯಸ್ವಾಮಿ, ನಂತರ ಬಿಡದಿ–ರಾಮನಗರ ಮಧ್ಯೆ ಇರುವ ಹನುಮಂತ, ಕೆಂಗಲ್ ಆಂಜನೇಯಸ್ವಾಮಿ, ದೇವರಹೊಸಹಳ್ಳಿ, ಚನ್ನಪಟ್ಟಣ, ಬ್ರಹ್ಮಣ್ಯಪುರ, ಮದ್ದೂರು, ಮಂಡ್ಯ, ಬನ್ನೂರು, ಟೀನರಸೀಪುರ, ಮೈಸೂರು, ಶ್ರೀರಂಗಪಟ್ಟಣ, ನಂಜನಗೂಡು, ಸತ್ಯಮಂಗಲ, ಈರೋಡ್, ಭವಾನಿ, ಸೇಲಂ, ಚಿಂತಲವಾಡಿ, ಹೀಗೆ ಶ್ರೀರಂಗಂಗೆ ಹೋಗುವ ದಾರಿಯಲ್ಲೆಲ್ಲಾ ಪ್ರತಿಷ್ಟೆ ಮಾಡಿದ್ದಾರೆ, ಪಾಂಡಿಚೇರಿ, ಮದ್ರಾಸಿನ ಸುಪ್ರಸಿದ್ಧ ಪಾರ್ಥಸಾರಥಿ ದೇವಾಲಯದಲ್ಲಿ, ಬದರೀಕ್ಷೇತ್ರದಲ್ಲೂ ಮಾಡಿದ್ದಾರೆ. ಯಲಹಂಕ, ರಾಜಾನುಕುಂಟೆ, ಕಾಕೋಳು, ಸಂತೆಬಿದನೂರು, ಪೆನುಗೊಂಡ, ಇತ್ಯಾದಿ. ಪೆನುಗೊಂಡ ಒಂದರಲ್ಲೇ 365ದಿನ ಉಳಿದಿದ್ದು 365 ಪ್ರಾಣದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆಂದೂ ಪ್ರತೀತಿಯಿದೆ. ಆದವಾನಿ ಪ್ರಾಂತ್ಯವೊಂದರಲ್ಲೇ 109 ವಿಗ್ರಹಗಳನ್ನು ಪ್ರತಿಷ್ಟೆ ಮಾಡಿದ್ದಾರೆ

## ವ್ಯಾಸರಾಜರ ಗ್ರಂಥಗಳು –

ಶ್ರೀವ್ಯಾಸರಾಜ ಗ್ರಂಥಮಾಲಿಕಾ

ಶ್ರೀವ್ಯಾಸರಾಜರಚಿತಾನ್ ಗ್ರಂಥಾನ್ ವಚ್ಮಿ ಯಥಾಮತಿ ।
ತತ್ವಪ್ರಕಾಶಿಕಾವ್ಯಾಖ್ಯಾಂ ಶ್ರೀಮತ್ತಾತ್ಪರ್ಯಚಂದ್ರಿಕಾಮ್ ।
ಖಂಡನತ್ರಯಟೀಕಾನಾಂ ಟಿಪ್ಪಣೀ: ಕೃತವಾನ್ ಗುರು: ।
ಮಂದಾರಮಂಜರೀನಾಮ್ನೀರಸ್ಪ್ರಷ್ಟಾರ್ಥಪ್ರಕಾಶಿಕಾ: ।
ಟಿಪ್ಪಣೀನ್ ತತ್ತ್ವೋದ್ಯೋತಸ್ಯ ತಥಾಶ್ರೀತರ್ಕತಾಂಡವಂ ।
ಭೇದೋಜ್ಜೀವನಗ್ರಂಥಂಜ ತಥಾ ನ್ಯಾಯಾಮೃತಂ ಗುರು: ।

೧. ತಾತ್ಪರ್ಯಚಂದ್ರಿಕೆ

೨. ನ್ಯಾಯಾಮೃತ

೩. ತರ್ಕತಾಂಡವ

೪. ಮಂದಾರಮಂಜರಿ –

ಅ. ಉಪಾಧಿಖಂಡನ ಮಂದಾರಮಂಜರೀ

ಆ. ಮಾಯಾವಾದಖಂಡನ ಮಂದಾರಮಂಜರೀ

ಇ. ಪ್ರಪಂಚಮಿಥ್ಯಾತ್ವಾನುಮಾನಖಂಡನ ಮಂದಾರಮಂಜರೀ

ಈ. ತತ್ವವಿವೇಕ ಮಂದಾರಮಂಜರೀ

ಉ. ತತ್ತ್ವಸಂಖ್ಯಾನ ಮಂದಾರಮಂಜರೀ

ಊ. ತತ್ತ್ವೋದ್ಯೋತ ಮಂದಾರಮಂಜರೀ

೫. ಭೇದೋಜ್ಜೀವನ

೬. ಪ್ರಮೇಯ ನವಮಾಲಿಕಾ

೭. ಗ್ರಂಥಮಾಲಿಕಾ ಸ್ತೋತ್ರ – ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳ ಪರಿಚಯ ಗ್ರಂಥ.

೮. ಶ್ರೀನಿವಾಸ ಸ್ತೋತ್ರ

೯. ಶ್ರೀ ಕೃಷ್ಣ ಮಂಗಲಾಷ್ಟಕ

೧೦.ಶ್ರೀ ಯಂತ್ರೋದ್ಧಾರಕ ಸ್ತೋತ್ರ –

೧೧. ಶಿವಸ್ತುತಿ

೧೨. ಶ್ರೀಪಾದರಾಜ ಪಂಚರತ್ನಮಾಲಿಕ ಸ್ತೋತ್ರ

೧೩. ಶ್ರೀಬ್ರಹ್ಮಣ್ಯತೀರ್ಥ ಪಂಚರತ್ನಮಾಲಿಕಾ ಸ್ತೋತ್ರ

೧೪. ಸತ್ತರ್ಕವಿಲಾಸ

೧೫. ಭೇದಸಂಜೀವಿನಿ

೧೬. ವೇದಾಂತಸಂಗ್ರಹ ಖಂಡನ

೧೭. ಹನುಮತ್ಸಂಪ್ರೋಕ್ಷಣವಿಧಿ

೧೮. ವಾಯುಸ್ತುತಿಪುರಶ್ಚರಣವಿಧಿ.

**ತಾತ್ಪರ್ಯಚಂದ್ರಿಕೆ** – ಇದು ವ್ಯಾಸರಾಜರ ಸ್ವತಂತ್ರ ಗ್ರಂಥ. ಇದು ಜಯತೀರ್ಥರ ಸೂತ್ರಭಾಷ್ಯದ ವ್ಯಾಖ್ಯಾನವಾದ ತತ್ವಪ್ರಕಾಶಿಕ ಗ್ರಂಥದ ಟಿಪ್ಪಣಿ. ಇಲ್ಲಿ ವ್ಯಾಸರಾಜರು ಪ್ರತಿಯೊಂದು ಬ್ರಹ್ಮಸೂತ್ರಕ್ಕೂ ಪರಕೀಯ ಮತಗಳು ಮಾಡಿರುವ ಅರ್ಥವನ್ನು ಖಂಡಿಸಿ, ಶ್ರೀಮದಾಚಾರ್ಯರ ಅರ್ಥವೇ ಸರಿ ಎಂಬುದನ್ನು ಪೂರ್ವಮೀಮಾಂಸಾ ಮುಂತಾದ ದಾರ್ಶನಿಕ ನ್ಯಾಯಗಳಿಂದ ಸಾಧಿಸಿ ದ್ವೈತ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದಾರೆ

**ಆದ್ಯಂತಶ್ಲೋಕಗಳು** –

**ಅಸ್ಪೃಷ್ಟದೋಷಗಂಧಾಯ ಕಲ್ಯಾಣಗುಣಸಿಂಧವೇ ।**
**ನಮೋ ನಮೋ ಭಕ್ತಿಮುಕ್ತಿದಾಯಿನೇ ಶೇಷದಾಯಿನೇ ॥**

ತಾತ್ಪರ್ಯಚಂದ್ರಿಕೆಯ ವ್ಯಾಖ್ಯಾನ ಗ್ರಂಥಗಳು –

೧. ಬೃಹದ್ಗುರುರಾಜೀಯ ೨. ಲಘುಗುರುರಾಜೀಯ

೩. ಶರದೇಂದು ೪. ತಾತ್ಪರ್ಯಚಂದ್ರಿಕಾ ಪ್ರಕಾಶ

ತಾತ್ಪರ್ಯಚಂದ್ರಿಕೆಯ ಮೇಲೆ ಬಂದಿರುವ ಖಂಡನ ಗ್ರಂಥಗಳು –

೧. ತತ್ವಮಾರ್ತಾಂಡ,

೨. ಶಂಕರಪಾದಭೂಷಣ

೩. ಮಧ್ವಚಂದ್ರಿಕಖಂಡನ

೪. ಅದ್ವೈತದೀಪಿಕಾ

ತಾತ್ಪರ್ಯಚಂದ್ರಿಕೆಯ ಮಂಡನಗ್ರಂಥಗಳು :–

೧. ಶರದಾಗಮ ೨. ದ್ವೈತಭೂಷಣ ೩. ಅಭಿನವಶರದಾಗಮ

೪. ಕಟ್ಟೇನರಸಿಂಹಾಚಾರ್ಯರ ಗ್ರಂಥ ೫. ತಾತ್ಪರ್ಯಚಂದ್ರಿಕಾಮಂಡನ

೬. ತಾತ್ಪರ್ಯಚಂದಿಕಾಪ್ರಕಾಶ ಪ್ರಸರ ೭. ಅದ್ವೈತದೀಪಿಕಾ ವಾತಾಗಮ

**ನ್ಯಾಯಾಮೃತ** – ಆದ್ಯಂತಶ್ಲೋಕಗಳು –

ನಿಖಿಲಗುಣನಿಕಾಯಂ ನಿತ್ಯನಿರ್ಧೂತಹೇಯಂ ।
ಶುಬತಮಮಿತಿಮೇಯಂ ಶುದ್ಧಸೌಖ್ಯಾಪ್ತ ಪಾಯಂ ॥
ಸಕಲನಿಗಮಗೇಯಂ ಸರ್ವಶಬ್ದಾಭಿಧೇಯಂ ।
ನವಜಲಧರಕಾಯಂ ನೌಮಿ ಲಕ್ಷ್ಮೀಸಹಾಯಮ್ ॥

ನಮೋ ನಿರಸ್ತದೋಷಾಯ ಸಮಸ್ತಗುಣರಾಶಯೇ।
ವಿಮಲಾನಂದದೇಹಾಯ ಕಮಲಾಪತಯೇ ಸದಾ ॥
ಮತ್ಪ್ರೇರಣಕೇಣ ಹರಿಣಾ ಯಾ ಪೂಜಾ ಸ್ವಸ್ಯ ಕಾರಿತಾ।
ವಾಗ್ಯಜ್ಞರೂಪಾ ಲಕ್ಷ್ಮೀಶಸ್ತಯಾ ಪ್ರೀನಾತು ಕೇಶವ: ॥

ದ್ವೈತ–ಅದ್ವೈತ ಎರಡಕ್ಕೂ ವಾದಗ್ರಸ್ಥವಾದ ಎಲ್ಲ ವಿಚಾರಗಳನ್ನೂ ಅಮೂಲಾಗ್ರವಾಗಿ ಪರಿಶೋಧಿಸಿ, ಶ್ರೀ ಮಧ್ವರ ತತ್ವಗಳನ್ನು ಸಮರ್ಥಿಸುವ ಈ ಗ್ರಂಥವು - ನಾಲ್ಕು ಪರಿಚ್ಛೇದಗಳ ಒಟ್ಟು ಹದಿನಾಲ್ಕು ಪ್ರಕರಣಾಗಳಿಂದ ಕೂಡಿದೆ. ಅದ್ವೈತದ ಜಗತ್ಮಿಥ್ಯತ್ವದ ವಿಮರ್ಶೆಯೊಂದಿಗೆ ಆರಂಭಿಸಿ, ತಾರತಮ್ಯವನ್ನು ಮುಕ್ತಿಯಲ್ಲೂ ಸಮರ್ಥಿಸುತ್ತದೆ. ಈ ಗ್ರಂಥದಲ್ಲಿ ವ್ಯಾಸರಾಜರು ಅದ್ವೈತಗ್ರಂಥಗಳಾದ ಖಂಡನಖಂಡನಖಾದ್ಯ, ಚಿತ್ಸುಖಿ, ಉಪದೇಶಸಾಹಸ್ರೀ, ಇಷ್ಟಸಿದ್ದಿ, ಮುಂತಾದ ಪ್ರಾಚೀನ ಗ್ರಂಥಗಳನ್ನು ಉದಾಹರಿಸಿ, ತಮ್ಮ ಅದ್ವೈತ ಗ್ರಂಥ ಪಾಂಡಿತ್ಯವನ್ನೂ ಪರಿಚಯಿಸಿದ್ದಾರೆ. ನೂರಕ್ಕೂ ಹೆಚ್ಚು ನ್ಯಾಯ, ವ್ಯಾಕರಣ, ಪೂರ್ವಮೀಮಾಂಸಾ ಶಾಸ್ತ್ರಗಳಲ್ಲಿ ತೋರಿಸಿರುವ ಪ್ರಚಂಡ ಪಾಂಡಿತ್ಯ ಪ್ರದರ್ಶಿಸಿದ್ದಾರೆ.

ನ್ಯಾಯಾಮೃತಕ್ಕೆ ಆಗಿನ ಕಾಲದಲ್ಲೇ ಕಾಶಿಯಲ್ಲಿ ಪ್ರಸಿದ್ದರಾಗಿದ್ದ ಮಧುಸೂಧನ ಸರಸ್ವತಿಗಳಿಂದ “ಅಧ್ವೈತಸಿದ್ಧಿ”ಗ್ರಂಥದ ಮೂಲಕ ಖಂಡನೆಯ ಪ್ರಯತ್ನ ನಡೆಯಿತು. ನೃಸಿಂಹಾಶ್ರಮ, ಅಪ್ಪಯ್ಯದೀಕ್ಷಿತರು ಮುಂತಾದವರೆಲ್ಲ ಕನಿಷ್ಟ ಕೆಲವು ಭಾಗಗಳನ್ನಾದರು ಖಂಡಿಸಲು ಪ್ರಯತ್ನಿಸಿ ವಿಫಲರಾಗಿದ್ದಾರೆ. ಈ ಕೆಲವರು ಬರೆದ ಖಂಡನಕ್ಕೆ ವಿಜಯೀಂದ್ರರು, ತರಂಗಿಣೀ ರಾಮಾಚಾರ್ಯರು ಖಂಡನಬರೆದು ಮಧ್ವ ಮತ ಉದ್ಧರಿಸಿದ್ದಾರೆ. ವ್ಯಾಸರಾಜರು ವೃಂದಾವನಸ್ಥರಾಗಿ ನಾಲ್ಕು ಶತಮಾನವಾದರೂ ಇನ್ನೂ ಯಾರಿಗೂ ಖಂಡನೆ ಮಾಡಲಾಗಿಲ್ಲ.

ನ್ಯಾಯಾಮೃತಕ್ಕೆ ಬಂದಿರುವ ಖಂಡನ ಗ್ರಂಥಗಳು ಹಲವಾರು –

೧. ಅದ್ವೈತಸಿದ್ಧಿ – ಮಧುಸೂಧನ ಸರಸ್ವತಿಗಳಿಂದ – ಇದಕ್ಕೆ ೧೬ನೇ ಶತಮಾನದಲ್ಲೇ ತರಂಗಿಣೀ ರಾಮಾಚಾರ್ಯರು ಖಂಡನ ಬರೆದು ಮಧ್ವಮತವನ್ನು, ನ್ಯಾಯಾಮೃತವನ್ನೂ ಎತ್ತಿಹಿಡಿದಿದ್ದಾರೆ.
೨. ಅದ್ವೈತದೀಪಿಕಾ, ಭೇದದಿಕ್ಕಾರ - ನೃಸಿಂಹಾಶ್ರಮ ಎಂಬುವರಿಂದ - ವಿಜಯೀಂದ್ರರು ಇವುಗಳನ್ನು ಖಂಡಿಸಿದ್ದಾರೆ.
೩. ಅಪ್ಪಯ್ಯದೀಕ್ಷಿತರು (ವಿಜಯೀಂದ್ರರ ಸಮಕಾಲಿನರು) ಬರೆದ ಖಂಡನವನ್ನು ವಿಜೀಂದ್ರರು ಅಪ್ಪಯ್ಯದೀಕ್ಷಿತರ ಸಮ್ಮುಖದಲ್ಲೇ ಖಂಡಿಸಿದ್ದಾರೆ.

೪. "ಗುರುಚಂದ್ರಿಕ" ಮತ್ತು "ಲಘುಚಂದ್ರಿಕ" – ಬರೆದವರು ಬ್ರಹ್ಮಾನಂದಸರಸ್ವತಿಯುವರು ಇದನ್ನು ಕೂಡ ೧೭ನೇ ಶತಮಾನದಲ್ಲಿ ವನಮಾಲಿ ಮಿಶ್ರರು ತಮ್ಮ ತರಂಗಿಣೀಸೌರಭ, ನ್ಯಾಯಾಮೃತ ಸೌಗಂಧ್ಯ ಗ್ರಂಥದ ಮೂಲಕ ಖಂಡಿಸಿದ್ದಾರೆ.

| ನ್ಯಾಯಾಮೃತಕ್ಕೆ ಬಂದಿರುವ ಖಂಡನಗ್ರಂಥಗಳು | ಈ ಖಂಡನೆಗೆ ಪ್ರತಿಖಂಡನೆ ಮತ್ತು ಮಧ್ವಮತ ಸ್ಥಾಪನೆ |
|---|---|
| ೧.ಅದ್ವೈತಸಿದ್ಧಿ – ಮಧುಸೂಧನ ಸರಸ್ವತಿಗಳು | ತರಂಗಿಣೀ ರಾಮಾಚಾರ್ಯರು (೧೬ನೇ ಶತಮಾನ) |
| ೨.ಅದ್ವೈತದೀಪಿಕಾ, ಭೇದದಿಕ್ಕಾರ – ನೃಸಿಂಹಾಶ್ರಮ | ಶ್ರೀವಿಜಯೀಂದ್ರ ಶ್ರೀಪಾದಂಗಳವರಿಂದ ಖಂಡನೆ |
| ೩.ಅಪ್ಪಯ್ಯದೀಕ್ಷಿತರು ಬರೆದರು | ಶ್ರೀವಿಜಯೀಂದ್ರ ಶ್ರೀಪಾದಂಗಳವರು ಅಪ್ಪಯ್ಯ ದೀಕ್ಷಿತರ ಸಮ್ಮುಖದಲ್ಲೇ ಖಂಡನೆ |
| ೪."ಗುರುಚಂದ್ರಿಕ", "ಲಘುಚಂದ್ರಿಕ" – ಬ್ರಹ್ಮಾನಂದಸರಸ್ವತಿ | ವನಮಾಲಿ ಮಿಶ್ರರು ತಮ್ಮ ತರಂಗಿಣೀಸೌರಭ, ನ್ಯಾಯಾಮೃತ ಸೌಗಂದ್ಯ ಗ್ರಂಥದ ಮೂಲಕ (೧೭ನೇ ಶತಮಾನ) |
| ೫.ತರಂಗಿಣೀಸೌರಭ ಖಂಡನ –ವಿಠಲೇಶೋಫಾಧ್ಯಾಯೀ | ಇದನ್ನೂ ಖಂಡಿಸಲಾಗಿದೆ |

**ನ್ಯಾಯಾಮೃತಕ್ಕೆ ವ್ಯಾಖ್ಯಾನ/ಟಿಪ್ಪಣಿಗಳು**

೧. ವಿದ್ಯಾಧೀಶರ ಪೂರ್ವಾಶ್ರಮ ಸೋದರರಾದ ರಂಗಕೇಶವಾಚಾರ್ಯರು "ಗುರುರಾಜೀಯ".

೨. ವ್ಯಾಸತತ್ತ್ವಜ್ಞರು – "ವ್ಯಜನ"

೩. ಮನ್ನಾರು ಕೃಷ್ಣಾಚಾರ್ಯರು – "ಮಾಧುರೀ"

೪. ಯಾದವೇಂದ್ರರು

೫. ಶ್ರೀಲಕ್ಷ್ಮೀನಾಥತೀರ್ಥರು

೬. ಶ್ರೀ ವಿಜಯೀಂದ್ರರು – "ಲಘ್ವಾಮೋದ" ಮತ್ತು "ಗುರ್ವಾಮೋದ"

೭. ಬಿದರಹಳ್ಳಿ ಶ್ರೀನಿವಾಸಾಚಾರ್ಯರು

೮. ಕಾಶೀ ತಿಮ್ಮಣ್ಣಾಚಾರ್ಯರು (ಕೆಲವು ಭಾಗಗಳಿಗೆ)

ತರ್ಕತಾಂಡವ –

ಈ ಗ್ರಂಥವನ್ನು "ಗ್ರಂಥಾದಿರಾಜ" ಎಂದು ಕರೆಯುತ್ತಾರೆ ಏಕೆಂದರೆ ಯಾರೊಬ್ಬರೂ ಈ ಗ್ರಂಥವನ್ನು ಖಂಡನೆಗೆ ಪ್ರಯತ್ನವನ್ನೇ ಮಾಡಿಲ್ಲ.

ಆದಿಭಾಗದ ಶ್ಲೋಕ –

ಅನಂತಕಲ್ಯಾಣಗುಣೈಕರಾಶಿಮಶೇಷದೋಷೋಜ್ಝಿತಪ್ರಮೇಯಮ್ ।
ಮುಮುಕ್ಷುಭಿ: ಸೇವ್ಯಮನಂತ ಸೌಖ್ಯಪ್ರದಂ ರಮೇಶಂ ಪ್ರಣಮಾಮಿ ನಿತ್ಯಮ್।
ಶ್ರೀಶಪಾದಾಂಬುಜಾಸಕ್ತ: ಕರುಣಾಪೂರಶೀತಲ: ।
ಮಧ್ವಾಖ್ಯೋ ಮರುದಂಶೋ ಮೇ ಸಂತಾಪಾನ್ ಹಂತು ಸಂತತಂ ॥

ಭೇದೋಜ್ಜೀವನ :

ಆದ್ಯಂತಶ್ಲೋಕಗಳು :
ಸ್ವಭಾವತ: ಸ್ವತಂತ್ರತ್ವ ಪ್ರಮುಖೈರ್ನಿಖಿಲೈರ್ಗುಣೈ: ।
ವಿಭಿನ್ನೋ ವಿಶ್ವತೋ ವಿಷ್ಣುರ್ಜಯತಾಜ್ಜಗದೀಶ್ವರ: ॥
ರಮಾನಾಥಾಯ ಹರಯೇ ಪೂರ್ಣಾನಂದಶರೀರಿಣೇ ।
ನಿರ್ದೋಷಗುಣಪೂರ್ಣಾಯ ಸರ್ವಯಜ್ಞಭುಜೇ ನಮ: ॥

ಪಂಚಭೇದಗಳನ್ನು, ವಿಷ್ಣುಸರ್ವೋತ್ತಮತ್ವವನ್ನೂ ಸಾರುವಗ್ರಂಥ – ಭೇದೋಜ್ಜೀವನ

ಶ್ರೀಮಧ್ವಮತಪ್ರಮೇಯನವರತ್ನಮಾಲಿಕಾ

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ವತೋ ।
ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ ॥
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥

## ಶ್ರೀ ಯಂತ್ರೋದ್ಧಾರಕ ಸ್ತೋತ್ರ –

ನಮಾಮಿ ದೂತಮ್ ರಾಮಸ್ಯ ಸುಖದಂ ಚ ಸುರದ್ರುಮಮ್ ।
ಪೀನವೃತ್ತಮಹಾಬಾಹುಂ ಸರ್ವಶತ್ರುನಿವಾರಣಮ್ । ೧ ।
ನಾನಾರತ್ನ ಸಮಾಯುಕ್ತ ಕುಂಡಲಾದಿವಿರಾಜಿತಮ್ ।
ಸರ್ವದಾಽಭೀಷ್ಟದಾತಾರಂ ಸತಾಂ ವೈ ದೃಢಮಾಹವೇ । ೨ ।
ವಾಸಿನಂ ಚಕ್ರತೀರ್ಥಸ್ಯ ದಕ್ಷಿಣಸ್ಥಗಿರೌ ಸದಾ ।
ತುಂಗಾಂಭೋಧಿ ತರಂಗಸ್ಯ ವಾತೇನ ಪರಿಶೋಭಿತೇ । ೩ ।
ನಾನಾದೇಶ ಗತೈ: ಸದ್ಭಿ: ಸೇವ್ಯಮಾನಂ ನೃಪೋತ್ತಮೈ: ।
ಧೂಪದೀಪಾದಿ ನೈವೇದ್ಯೈ: ಪಂಚಖಾದ್ಯೈಶ್ಚ ಶಕ್ತಿತ: । ೪ ।
ಭಜಾಮಿ ಶ್ರೀಹನೂಮಂತಂ ಹೇಮ ಕಾಂತಿಸಮಪ್ರಭಮ್ ।
ವ್ಯಾಸತೀರ್ಥಯತೀಂದ್ರೇಣ ಪೂಜಿತಂ ಪ್ರಣಿಧಾನ ತ: । ೫ ।
ತ್ರಿವಾರಂ ಯ: ಪಠೇನ್ನಿತ್ಯಂ ಸ್ತೋತ್ರಂ ಭಕ್ತ್ಯಾ ದ್ವಿಜೋತ್ತಮ: ।
ವಾಂಛಿತಂ ಲಭತೇಽಭೀಕ್ಷ್ಣಂ ಷಣ್ಮಾಸಾಭ್ಯಂತರೇ ಖಲು । ೬ ।
ಪುತ್ರಾರ್ಥೀ ಲಭತೇ ಪುತ್ರಂ ಯಶೋರ್ಥೀ ಲಭತೇ ಯಶ: ।
ವಿದ್ಯಾರ್ಥೀ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಮ್ । ೭ ।
ಸರ್ವಥಾ ಮಾಽಸ್ತು ಸಂದೇಹೋ ಹರಿ: ಸಾಕ್ಷೀ ಜಗತ್ಪತಿ: ।
ಯ: ಕರೋತ್ಯತ್ರ ಸಂದೇಹಂ ಸ ಯಾತಿ ನರಕಂ ಧ್ರುವಮ್ । ೮ ।
॥ ಇತಿ ಶ್ರೀ ವ್ಯಾಸರಾಜವಿರಚಿತಂ ಯಂತ್ರೋದ್ಧಾರಕ ಹನೂಮತ್ಸ್ತೋತ್ರಮ್ ॥

## ಗ್ರಂಥಮಾಲಿಕಾ ಸ್ತೋತ್ರ –

**ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳ ಪರಿಚಯ ಗ್ರಂಥ.**

ಕೃಷ್ಣಂ ವಿದ್ಯಾಪತಿಂ ನತ್ವಾ ಪೂರ್ಣ**ಬೋ**ಧಾರ್ಯಸದ್ಗುರೂನ್ ।
ಜಯತೀರ್ಥಮುನೀನ್ ನತ್ವಾ **ವಕ್ಷ್ಯೇSಹಂ** ಗ್ರಂಥಮಾಲಿಕಾಮ್ ॥ ೧ ॥
**ನಾರಾಯಣೇನ ವ್ಯಾಸೇನ ಪ್ರೇರಿತಸ್ತತ್ತ್ವಸಂವಿಧೇ** ।
ಗ್ರಂಥಾನ್ ಮಧ್ವಶ್ಚಕಾರಾಸೌ ಸಪ್ತತ್ರಿಂಶದಮಂದಧೀಃ ॥ ೨ ॥
ಗೀತಾಭಾಷ್ಯಂ ಚಕಾರಾಸೌ ಪ್ರಥಮಂ ತುಷ್ಟಿದಂ **ಹರೇ:** ।
ಭಾಷ್ಯಾಣುಭಾ**ಷ್ಯೇ ಚಕ್ರೇ**Sಥ **ಹ್ಯನುವ್ಯಾ**ಖ್ಯಾನಮುತ್ತಮಮ್ ॥ ೩ ॥
ಪ್ರಮಾಣಲಕ್ಷಣಂ ನಾಮ ಕಥಾಲಕ್ಷಣಸಂಜ್ಞಕಮ್ ।
ಉಪಾಧಿಖಂಡನಮ್ **ಚಕ್ರೇ** ಮಾಯಾವಾದಸ್ಯ ಖಂಡನಮ್ ॥ ೪ ॥
**ಚಕ್ರೇ** ಪ್ರಪಂಚಮಿಥ್ಯಾತ್ವಮಾನಖಂಡನಮುಚ್ಚಧೀಃ ।
ಚಕಾರ ತತ್ತ್ವಸಂಖ್ಯಾನಂ ಸಾಧನಂ ವಿಷ್ಣುದರ್ಶ**ನೇ** ॥ ೫ ॥
ಗ್ರಂಥಂ ತತ್ತ್ವವಿ**ವೇ**ಕಾಖ್ಯಂ **ತತ್ತೋ್ವೇದ್ಯೋತಂ ಹರೇ:** ಪ್ರಿಯಾಮ್ ।
ಕರ್ಮನಿರ್ಣಯನಾಮಾನಂ ಗ್ರಂಥಂ ನ್ಯಾಯಾರ್ಥಬೃಂಹಿತಮ್ ॥ ೬ ॥
ಸುಖತೀರ್ಥಮುನಿ**ಶ್ಚಕ್ರೇ** ವಿಷ್ಣುತತ್ತ್ವವಿನಿರ್ಣಯಮ್ ।
ಋಗ್ಭಾಷ್ಯಂ ಚ ಚಕಾರಾಸೌ ಸರ್ವ**ವೇ**ದಾರ್ಥ ನಿರ್ಣಯಮ್ ॥ ೭ ॥
**ಐತರೇಯಂ ತೈತ್ತಿರೀಯಂ ಬೃಹದಾರಣ್ಯಮೇವ ಚ** ।
**ಈಶಾವಾಸ್ಯಂ ಕಾಠಕಂ ಚ ಛಾಂದೋಗ್ಯಾಥರ್ವಣೇ ತಥಾ ॥ ೮ ॥**
ಮಾಂಡೂಕಂ ನಾಮ ಷಟ್ಪ್ರಶ್ನಂ ತಥಾ ತಲವಕಾರಕಮ್ ।
**ಚಕ್ರೇ ಭಾಷ್ಯಾಣಿ ದಿವ್ಯಾನಿ ದಶೋಪನಿಷದಾಂ ಗುರು: ॥ ೯ ॥**
ನಿರ್ಣಯಂ ಸರ್ವಶಾಸ್ತ್ರಾಣಾಂ ಗೀತಾತಾತ್ಪರ್ಯಸಂಜ್ಞಕಮ್ ।
ಸನ್ನ್ಯಾಯವಿವೃತಿಂ **ಚಕ್ರೇ** ನ್ಯಾಯಶಾಸ್ತ್ರನಿಕೃಂತನೀಮ್ ॥ ೧೦ ॥
**ನರಸಿಂಹನಖಸ್ತೋತ್ರಂ ಚಕ್ರೇ ಯಮಕಭಾರತಮ್** ।
**ದ್ವಾದಶಸ್ತೋತ್ರಮಕರೋತ್ ಕೃಷ್ಣಾಮೃತಮಹಾರ್ಣವಮ್ ॥ ೧೧ ॥**
ತಂತ್ರಸಾರಂ ಚಕಾರಾಸೌ ಸದಾಚಾರಸ್ಮೃತಿಂ ಸುಧೀಃ ।
ಶ್ರೀಮದ್ಭಾಗವತಸ್ಯಾಪಿ ತಾತ್ಪರ್ಯಂ ಜ್ಞಾನಸಾಧನಮ್ ॥ ೧೨ ॥

**ಮಹಾಭಾ**ರತತಾತ್ಪರ್ಯನಿರ್ಣಯಂ ಸಂಶಯಚ್ಛಿದಮ್ ।
ಯತಿಪ್ರಣವಕಲ್ಪಂ ಚ ಪ್ರಣವಾರ್ಥಪ್ರಕಾಶಕಮ್ ॥ ೧೩ ॥
ಜಯಂತೀ ನಿರ್ಣಯಂ **ಚಕ್ರೇ ದೇವಕೀ**ಗರ್ಭಜನ್ಮನಃ ।
ಕೃಷ್ಣಸ್ಯ ಕೃಷ್ಣಭ**ಕ್ತೋಽ**ಯಂ **ದ್ವೈ**ಪಾಯನಕರಾಬ್ಜಭೂಃ ॥ ೧೪ ॥
**ತ್ರಿಂಶತ್ಸಹಸ್ರಂ ದ್ವ್ಯಧಿಕಮಧಿಕಂ ಕೃಷ್ಣತಿಷ್ಟಿದಮ್ ।**
**ಏತೇಷಾಂ ಪಾಠಮಾತ್ರೇಣ ಮಧ್ವೇಶ: ಪ್ರೀಯತೇ ಹರಿ: ॥ ೧೫ ॥**
**ಶ್ರೀವ್ಯಾಸರಾಜ ವಿರಚಿತಾ "ಗ್ರಂಥಮಾಲಿಕಾ"ಸ್ತೋತ್ರಂ ಸಂಪೂರ್ಣಂ**

## ಶ್ರೀಪಾದರಾಜ ಪಂಚರತ್ನಮಾಲಿಕಾ –

**ವಂದೇ ಶ್ರೀಪಾದರಾಜಂ ರುಚಿತಮಹೃದಯಂ ಪೂಜಿತಶ್ರೀಸಹಾಯಂ ।**
**ನಿರ್ಧೂತಾಶೇಷಹೇಯಂ ನಿಭೃತಶುಭಚಯಂ ಭೂಮಿದೇವಾಭಿಗೇಯಮ್।**
**ವಿಪ್ರೇಭ್ಯೋ ದತ್ತದೇಯಂ ನಿಜಜನಸದಯಂ ಖಂಡಿತಾಶೇಷಮಾಯಂ ।**
**ನಿಷ್ಪ್ಯೂತ ಸ್ವರ್ಣಕಾಯಂ ಬಹುಗುಣನಿಲಯಂ ವಾದಿಸಂಘೈರಜೇಯಮ್ ॥ ೧ ॥**

**ಕ್ಷ್ಮಬ್ಧಾದ್ವಾದಿಕರೀಂದ್ರವಾದಿಪಟಲೀಕುಂಭಚ್ಛಟಾಭೇದನ–**
**ಪ್ರೌಢಪ್ರಾಭವತರ್ಕಸಂಘನಿಕರ ಶ್ರೇಣೀವಿಲಾಸೋಜ್ವಲ: ।**
**ಗೋಪೀನಾಥಮಹೇಂದ್ರಶೇಖರಲಸತ್ಪಾದಸ್ಥಲಾವಾಸಕೃತ್**
**ಪಾಯಾನ್ಮಾಂ ಭವಘೋರಕುಂಜರಭಯಾಚ್ಛ್ರೀಪಾದರಾಟ್ ಕೇಸರೀ ॥ ೨ ॥**
**ಬಿಭ್ರಾಣಂ ಕ್ಷೌಮವಾಸ: ಕರಧೃತವಲಯಂ ಹಾರಕೇಯೂರಕಾಂಚೀ–**
**ಗ್ರೈವೇಯಸ್ವರ್ಣಮಾಲಾಮಣಿಗಣಖಚಿತಾನೇಕಭೂಷಾಪ್ರಕರ್ಷಮ್ ।**
**ಭುಂಜಾನಾಂ ಷಷ್ಟಿ ಶಾಕಂ ಹಯಗಜಶಿಬಿಕಾನರ್ಘ್ಯಶಯ್ಯಾರಥಾಡ್ಯಂ**
**ವಂದೇ ಶ್ರೀಪಾದರಾಜಂ ತ್ರಿಭುವನವಿದಿತಂ ಘೋರವಾದಿಪ್ರಶಾಂತ್ಯೈ ॥ ೩ ॥**
**ಯದ್ವೃಂದಾವನಸೇವಯಾ ಸುವಿಮಲಾಂ ವಿದ್ಯಾಂ ಪಶೂನ್ ಸಂತತಿಂ**
**ಜ್ಞಾನಾಜ್ಞಾನಮನಲ್ಪಕೀರ್ತಿನಿವಹಂ ಪ್ರಾಪ್ನೋತಿ ಸೌಖ್ಯಂ ಜನ: ।**
**ತಂ ವಂದೇ ನರಸಿಂಹತೀರ್ಥನಿಲಯಂ ಶ್ರೀವ್ಯಾಸರಾಟ್ಪೂಜಿತಂ**
**ಧ್ಯಾಯಂತಂ ಮನಸಾ ನೃಸಿಂಹಚರಣಮ್ ಶ್ರೀಪಾದರಾಜಂ ಗುರುಮ್ ॥ ೪ ॥**

**ಕಾಶೀಕೇದಾರಮಾಯಾಕರಿಗಿರಿಮಧುರಾದ್ವಾರಕಾವೇಂಕಟೇಶ**
**ಶ್ರೀಮುಷ್ಣಕ್ಷೇತ್ರಪೂರ್ವತ್ರಿಭುವನವಿಲಸತ್ಪುಣ್ಯಭೀಮೀನಿವಾಸ: ।**
**ಗುಲ್ಮಾದಿವ್ಯಾಧಿಹರ್ತಾ ಗುರುಗುಣನಿಲಯೋ ಭೂತವೇತಾಲಭೇದೀ**
**ಭೂಯಾಚ್ಛ್ರೀಪಾದರಾಜೋ ನಿಖಿಲಶುಭತತಿಪ್ರಾಪ್ತಯೇ ಸಂತತಂ ನ: ॥ ೫ ॥**
**॥ಇತಿ ಶ್ರೀವ್ಯಾಸರಾಜವಿರಚಿತಾ ಶ್ರೀಶ್ರೀಪಾದರಾಜ ಪಂಚರತ್ನಮಾಲಿಕಾ॥**